**ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ**

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560 001.

ದೂರವಾಣಿ ಸಂಖ್ಯೆ 080-22224212

**No.**DPAR 08 CHUVISA (MC) 2023 **Date:** 28.04.2023

# ಪತ್ರಿಕಾ ಪ್ರಕಟಣೆ

**1. ಮಾದರಿ ನೀತಿ ಸಂಹಿತೆ ಚುನಾವಣಾ ವೆಚ್ಚ ಮತ್ತು ಕಾನೂನು ಮತ್ತು ಸುವ್ಯವಸ್ಥೆ ಜಾರಿ:**

ಚುನಾವಣೆಯ ವಿವಿಧ ಜಾಗೃತ ದಳಗಳಿಂದ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಮಾದರಿ ನೀತಿ ಸಂಹಿತೆ, ಚುನಾವಣಾ ವೆಚ್ಚ ಹಾಗೂ ಕಾನೂನು ಮತ್ತು ಸುವ್ಯವಸ್ಥೆಯನ್ನು ಉಲ್ಲಂಘಿಸಿರುವ ಕುರಿತು ದಿನಾಂಕ 29.03.2023 ರಿಂದ ಇಲ್ಲಿಯವರೆಗೆ ಈ ಕೆಳಗಿನ ಮಾಹಿತಿಗಳನ್ನು ಒದಗಿಸಲಾಗಿದೆ.

**ಅ. ವಶಪಡಿಸಿಕೊಂಡ ಸಂಚಿತ ವಿವರ 28.04.2023:**

| **ನಗದು** | | |
|---|---|---|
| **ಕಾರ್ಯಚರಣೆ ತಂಡಗಳು** | ನಿನ್ನೆ ದಿನ ವಶಪಡಿಸಿಕೊಂಡ ವಿವರ | ವಶಕ್ಕೆ ಪಡೆದ ಒಟ್ಟು ಸಂಚಿತ ವಿವರ |
| ವಿಚಕ್ಷಣ ದಳ/ಸ್ಥಿರ ಕಣ್ಗಾವಲು ಪೊಲೀಸ್ ಅಧಿಕಾರಿಗಳು | 2,57,48,383 | 82,78,96,498 |
| ಆದಾಯ ತೆರಿಗೆ ಇಲಾಖೆ | – | 20,11,70,290 |
| **ಒಟ್ಟು** | **2,57,48,383** | **1,02,90,66,788** |
| **ಉಚಿತ ಕೊಡುಗೆಗಳು** | | |
| **ಕಾರ್ಯಚರಣೆ ತಂಡಗಳು** | ನಿನ್ನೆ ದಿನ ವಶಪಡಿಸಿಕೊಂಡ ವಿವರ | ವಶಕ್ಕೆ ಪಡೆದ ಒಟ್ಟು ಸಂಚಿತ ವಿವರ |
| ವಿಚಕ್ಷಣ ದಳ/ಸ್ಥಿರ ಕಣ್ಗಾವಲು ಪೊಲೀಸ್ ಅಧಿಕಾರಿಗಳು | **6,63,530** | **22,12,75,726** |

| **ಮದ್ಯ** | | | | |
|---|---|---|---|---|
| **ಕಾರ್ಯಚರಣೆ ತಂಡಗಳು** | ನಿನ್ನೆ ದಿನ ವಶಪಡಿಸಿಕೊಂಡ ವಿವರ | | ವಶಕ್ಕೆ ಪಡೆದ ಒಟ್ಟು ಸಂಚಿತ ವಿವರ | |
| | ಪ್ರಮಾಣ (ಲೀಟರ್) | ಮೌಲ್ಯ (ರೂ) | ಪ್ರಮಾಣ (ಲೀಟರ್ | ಮೌಲ್ಯ (ರೂ) |
| ವಿಚಕ್ಷಣ ದಳ/ಸ್ಥಿರ ಕಣ್ಗಾವಲು ಪೊಲೀಸ್ ಅಧಿಕಾರಿಗಳು | 327.42 | 1,20,320 | 58,333.84 | 1,30,10,526 |
| ಅಬಕಾರಿ ಇಲಾಖೆ | 87,850.00 | 2,33,22,940 | 17,58,173.20 | 67,39,72,463 |
| **ಒಟ್ಟು** | **88,177.42** | **2,34,43,260** | **18,16,507.036** | **68,69,82,989** |

| ಡ್ರಗ್ಸ್/ಮಾದಕ ದ್ರವ್ಯಗಳು | | | | |
|---|---|---|---|---|
| **ಕಾರ್ಯಚರಣೆ ತಂಡಗಳು** | ನಿನ್ನೆ ದಿನ ವಶಪಡಿಸಿಕೊಂಡ ವಿವರ | | ವಶಕ್ಕೆ ಪಡೆದ ಒಟ್ಟು ಸಂಚಿತ ವಿವರ | |
| | ಪ್ರಮಾಣ (ಕೆ.ಜಿ) | ಮೌಲ್ಯ (ರೂ | ಪ್ರಮಾಣ (ಕೆ.ಜಿ) | ಮೌಲ್ಯ (ರೂ |
| **ವಿಚಕ್ಷಣ ದಳ/ಸ್ಥಿರ ಕಣ್ಗವಲು, ಪೊಲೀಸ್ ಮತ್ತು ಅಬಕಾರಿ ಇಲಾಖೆ ಅಧಿಕಾರಿಗಳು** | **139.45** | **89,87,000** | **1,388.94** | **17,88,36,326** |

| ಬೆಲೆ ಬಾಳುವ ಲೋಹಗಳು | | | | |
|---|---|---|---|---|
| **ಕಾರ್ಯಚರಣೆ ತಂಡಗಳು** | ನಿನ್ನೆ ದಿನ ವಶಪಡಿಸಿಕೊಂಡ ವಿವರ | | ವಶಕ್ಕೆ ಪಡೆದ ಒಟ್ಟು ಸಂಚಿತ ವಿವರ | |
| | ಪ್ರಮಾಣ (ಕೆ.ಜಿ) | ಮೌಲ್ಯ (ರೂ) | ಪ್ರಮಾಣ (ಕೆ.ಜಿ) | ಮೌಲ್ಯ (ರೂ) |
| ಬಂಗಾರ ವಿಚಕ್ಷಣ ದಳ/ಸ್ಥಿರ ಕಣ್ಗವಲು ಪೊಲೀಸ್ ಅಧಿಕಾರಿಗಳು) | 0.00 | - | 123.07 | 62,01,79,533 |
| ಬಂಗಾರ (ಆದಾಯ ತೆರಿಗೆ ಇಲಾಖೆ) | 0.00 | - | 26.23 | 13,99,68,687 |
| **ಒಟ್ಟು ಬಂಗಾರ** | **0.00** | **-** | **149.31** | **76,01,48,220** |
| ಬೆಳ್ಳಿ (ವಿಚಕ್ಷಣ ದಳ/ಸ್ಥಿರ ಕಣ್ಗವಲು ಪೊಲೀಸ್ ಅಧಿಕಾರಿಗಳು) | 0.00 | - | 599.61 | 4,15,93,176 |
| ಬೆಳ್ಳಿ ಆದಾಯ ತೆರಿಗೆ ಇಲಾಖೆ | 0.00 | - | 36.85 | 27,31,000 |
| **ಒಟ್ಟು ಬೆಳ್ಳಿ** | **0.00** | **-** | **636.46** | **4,43,24,176** |
| **ಒಟ್ಟು ಬಂಗಾರ, ಬೆಳ್ಳಿ** | **0.00** | **-** | **785.76** | **80,44,72,396** |

*****

| | |
|---|---|
| **ನಿನ್ನೆ ದಿನ ವಶಪಡಿಸಿಕೊಂಡ *(ಮೌಲ್ಯ ರೂ.)*** | **5,88,42,173** |
| **ವಶಪಡಿಸಿಕೊಂಡ ಸಂಚಿತ *(ಮೌಲ್ಯ ರೂ.)*** | **292,06,34,225** |

**ಆ. ಪ್ರಕರಣ ದಾಖಲು:**

- ನಗದು, ಮದ್ಯ, ಮಾದಕ ದ್ರವ್ಯ, ಬೆಲೆಬಾಳುವ ಲೋಹ ಮತ್ತು ಉಡುಗೊರೆ ವಸ್ತುಗಳನ್ನು ವಶಪಡಿಸಿಕೊಂಡಿರುವ ವಿಚಕ್ಷಣ ದಳ, ಸ್ಥಿರ ಕಣ್ಗಾವಲು ತಂಡಗಳು ಮತ್ತು ಪೊಲೀಸ್ ಅಧಿಕಾರಿಗಳು **2,226** ಪ್ರಥಮ ತನಿಖಾ ವರದಿ (FIR) ದಾಖಲಿಸಿದ್ದಾರೆ.

- ಚುನಾವಣೆ ಘೋಷಣೆಯಾದ ದಿನಾಂಕದಿಂದ ಇಲ್ಲಿಯವರೆಗೆ ಒಟ್ಟಾರೆ **69,805** ಶಸ್ತ್ರಾಸ್ತ್ರಗಳನ್ನು ಜಮೆ ಮಾಡಿಸಿಕೊಳ್ಳಲಾಗಿದೆ, **18** ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. **20** ಶಸ್ತ್ರಾಸ್ತ್ರಗಳ ಪರವಾನಿಗೆ ರದ್ದು ಪಡಿಸಲಾಗಿದೆ. ಸಿಆರ್‌ಪಿಸಿ ಕಾಯ್ದೆಯಡಿ **5,329** ಪ್ರಕರಣಗಳನ್ನು ದಾಖಲಿಸಲಾಗಿದೆ. ಅವುಗಳಲ್ಲಿ **9,569** ವ್ಯಕ್ತಿಗಳಿಂದ ಮುಚ್ಚಳಿಕೆ ಪತ್ರ ಪಡೆಯಲಾಗಿದೆ. ಚುನಾವಣೆ ಘೋಷಣೆಯಾದ ದಿನದಿಂದ ಇಲ್ಲಿಯವರೆಗೆ **14,885** ಜಾಮೀನು ರಹಿತ ವಾರೆಂಟ್‌ಗಳನ್ನು ಜಾರಿಗೊಳಿಸಲಾಗಿದೆ.
- ಅಬಕಾರಿ ಇಲಾಖೆಯು **2,853** ಗಂಭೀರ ಪ್ರಕರಣಗಳನ್ನು ಹಾಗೂ **2,549** ಮದ್ಯದ ಪರವಾನಿಗೆ ಉಲ್ಲಂಘಿಸಿದ ಪ್ರಕರಣಗಳು, **89** ಎನ್‌ಡಿಪಿಎಸ್ ಮತ್ತು ಕರ್ನಾಟಕ ಅಬಕಾರಿ ಕಾಯ್ದೆ 1965ರ ಪರಿಚ್ಛೇದ 15 (ಎ) ಅನ್ವಯ ಒಟ್ಟು **28,127** ಪ್ರಕರಣಗಳನ್ನು ದಾಖಲಿಸಿದೆ ಮತ್ತು **1,962** ವಿವಿಧ ಮಾದರಿಯ ವಾಹನಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ.

**ಇ. ವಿಶೇಷ ವರದಿ:**

- ವಿಚಕ್ಷಣ ದಳವು ಬೆಂಗಳೂರು ನಗರ ಪೂರ್ವ ಜಿಲ್ಲೆಯ ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದಲ್ಲಿ ರೂ. **25,74,000** ಮೌಲ್ಯದ **50.461** ಡ್ರಗ್ಸ್ (ಮಾದಕ ಪದಾರ್ಥ) ವನ್ನು ವಶಪಡಿಸಿಕೊಂಡಿದೆ.
- ಸ್ಥಿರ ಕಣ್ಗಾವಲು ಪಡೆ ಉತ್ತರ ಕನ್ನಡ ಜಿಲ್ಲೆಯ ಕುಮಟಾ ವಿಧಾನಸಭಾ ಕ್ಷೇತ್ರದಲ್ಲಿ ರೂ. **93,50,000** ನಗದು ವಶಪಡಿಸಿಕೊಂಡಿದೆ.
- ಸ್ಥಿರ ಕಣ್ಗಾವಲು ಪಡೆ ಬೆಳಗಾವಿ ಜಿಲ್ಲೆಯ ಗೋಕಾಕ್ ವಿಧಾನಸಭಾ ಕ್ಷೇತ್ರದಲ್ಲಿ ರೂ. **50,00,000** ನಗದು ವಶಪಡಿಸಿಕೊಂಡಿದೆ.

**2. ಸಾರ್ವಜನಿಕ ಕುಂದುಕೊರತೆಗಳ ಇತ್ಯರ್ಥ:**

ಮತದಾರರ ಸಹಾಯವಾಣಿ ಮೂಲಕ ಸ್ವೀಕರಿಸಲಾದ **19,908** ಕರೆಗಳಲ್ಲಿ **19,152** ಸಾರ್ವಜನಿಕರು ಮಾಹಿತಿ ಕೋರಿದ್ದಾರೆ. **34** ಜನರು ಪ್ರತಿಕ್ರಿಯೆ (ಫೀಡ್‌ಬ್ಯಾಕ್) ನೀಡಿದ್ದಾರೆ. **35** ಜನರು ಸಲಹೆಗಳನ್ನು ನೀಡಿದ್ದಾರೆ ಮತ್ತು **687** ಜನರು ದೂರುಗಳನ್ನು ದಾಖಲಿಸಿದ್ದಾರೆ. ಕರೆಗಳ ಮೂಲಕ ಸ್ವೀಕರಿಸಿದ ಎಲ್ಲಾ **19,908** ದೂರುಗಳನ್ನು ಇತ್ಯರ್ಥಪಡಿಸಲಾಗಿದೆ. ಇದಲ್ಲದೇ ಎನ್‌ಜಿಆರ್‌ಎಸ್ ಪೋರ್ಟ್‌ನಲ್ಲಿ **8,490** ದೂರುಗಳನ್ನು ನಾಗರಿಕರು ನೋಂದಾಯಿಸಿದ್ದು ಇವುಗಳಲ್ಲಿ **8,208** ದೂರುಗಳನ್ನು ಇತ್ಯರ್ಥಪಡಿಸಲಾಗಿದೆ.

**3. ಸಿ–ವಿಜಿಲ್:**

ಸಿ–ವಿಜಿಲ್ ಅಪ್ಲೀಕೇಷನ್ ಮೂಲಕ **8,880** ದೂರು ಸ್ವೀಕರಿಸಲಾಗಿದ್ದು ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಪರವಾನಿಗೆ ಇಲ್ಲದ ಪೋಸ್ಟರ್/ಬ್ಯಾನರ್ ಅಂಟಿಸಿದ ಪ್ರಕರಣಗಳು **4,733,** ಹಣ ಹಂಚಿಕೆ ಪ್ರಕರಣಗಳು **106,** ಕಡ್ಡಾಯವಾಗಿ ಮಾಡಬೇಕಾದಲ್ಲದ ಪೋಸ್ಟರ್ ಪ್ರಕರಣಗಳು **228,** ಬಂದೂಕುಗಳ ಪ್ರದರ್ಶಿಸಿ ಬೆದರಿಸಿದ ಪ್ರಕರಣಗಳು **82,** ಉಡುಗೊರೆ, ಕೂಪನ್ ಹಂಚಿಕೆ ಪ್ರಕರಣಗಳು **96,** ಮದ್ಯ ಹಂಚಿಕೆ ಪ್ರಕರಣಗಳು **78,** ಆಸ್ತಿ ಹಾನಿಗೊಳಿಸಿದ ಪ್ರಕರಣಗಳು **345,** ಪರವಾನಿಗೆ ಇಲ್ಲದ ವಾಹನ ಅಥವಾ ಬೆಂಗಾವಲು ಪಡೆ ಪ್ರಕರಣಗಳು **151,** ದಾಖಲಾಗಿದ್ದು, ಈ ಪೈಕಿ **7,569** ದೂರುಗಳು ನಿಜವೆಂದು ಕಂಡುಬಂದಿದ್ದು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

**4. ಮಾಧ್ಯಮ:**

ವಿವಿಧ ಮಾಧ್ಯಮಗಳ ಮೂಲಕ ದೂರುಗಳನ್ನು ಸ್ವೀಕರಿಸಲಾಗಿದ್ದು, ಇಮೇಲ್ ಮೂಲಕ **335** ಮತ್ತು ಪತ್ರಗಳ ಮೂಲಕ **500** ಸುದ್ದಿಪತ್ರಿಕೆಗಳಿಂದ **142,** ಟಿ.ವಿ ಚಾನಲ್‌ಗಳಿಂದ **56** ಮತ್ತು ಸಾಮಾಜಿಕ ಜಾಲತಾಣಗಳಿಂದ **79** ಸೇರಿದಂತೆ ಒಟ್ಟು **1,112** ದೂರುಗಳು ಬಂದಿದ್ದು **841** ದೂರುಗಳನ್ನು ವಿಲೇವಾರಿ ಮಾಡಲಾಗಿದೆ.

**5. ಸುವಿಧಾ:**

ಸುವಿಧಾ ಅಡಿಯಲ್ಲಿ ವಿವಿಧ ಅನುಮತಿಗಳನ್ನು ಕೋರಿ ಇವರೆಗೆ ಒಟ್ಟು **15,309** ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಅದರಲ್ಲಿ **12,364** ಅರ್ಜಿಗಳಿಗೆ ಅನುಮತಿ ನೀಡಲಾಗಿದ್ದು, **1,737** ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಅವುಗಳಲ್ಲಿ **243** ಅರ್ಜಿಗಳು ಪ್ರಗತಿಯಲ್ಲಿವೆ. **643** ಬಾಕಿ ಉಳಿದಿದ್ದು, **322** ಅರ್ಜಿಗಳು ರದ್ದಾಗಿರುತ್ತವೆ.